ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಪಾಲಿಸಿ/ಬ್ಯಾ.ಹು.ಕು/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರ, 18ನೇ ಅಡ್ಡರಸ್ತೆ,
ಬೆಂಗಳೂರು- 560012
ದಿನಾಂಕ:28 -01-2020

## ಸುತ್ತೋಲೆ

ವಿಷಯ:- ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಯನ್ನು ತುಂಬುವ ಕುರಿತು.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 19 ಎಸ್‌ಬಿಸಿ 89 ದಿನಾಂಕ 12-07-1989
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೇಹಿಮ 95 ದಿನಾಂಕ:20-06-1995 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 53 ಸೇನೇನಿ 2007 ದಿನಾಂಕ:04-01-2008
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999 ದಿನಾಂಕ:09-10-2006.
4. ಸರ್ಕಾರದ ಅ.ಸ.ಪ ಸಂಖ್ಯೆ: ಇಡಿ 416 ಪಿಎಂಸಿ 2018 ದಿನಾಂಕ 22-10-2018
5. ಈ ಕಛೇರಿ ಸಮ ಸಂಖ್ಯೆ ಅ.ಸ.ಪ ದಿನಾಂಕ:25-01-2019.
6. ಸರ್ಕಾರದ ಅ.ಸ.ಪ ಸಂಖ್ಯೆ: ಇಡಿ 416 ಪಿಎಂಸಿ 2018 ದಿನಾಂಕ 29-01-2019
7. ಈ ಕಛೇರಿ ಸಮ ಸಂಖ್ಯೆ ಅ.ಸ.ಪ ದಿನಾಂಕ:12-02-2019.
8. ಸರ್ಕಾರದ ಪತ್ರ ಸಂಖ್ಯೆ: ಸಕಇ 55 ಎಸ್.ಟಿ.ಸಿ 2019 ದಿನಾಂಕ 14-01-2020

*%*%*

1. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 19 ಎಸ್‌ಬಿಸಿ 89 ದಿನಾಂಕ 12-07-1989 ರ ಆದೇಶದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ದಿನಾಂಕ:01—01-1986 ರಿಂದ ಗುರ್ತಿಸಲು ಆದೇಶಿಸಿದೆ.
2. ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ತೆರವಾಗುವ ಹುದ್ದೆಗಳಿಗೆ ಖಾಸಗಿ ಪದವಿ ಪೂರ್ವ ಕಾಲೇಜುಗಳ ನಿಯಮಗಳು 2006ರ ನಿಯಮ 17(2 ರಿಂದ 8)ರ ವರೆಗಿನ ನಿಯಮಗಳಂತೆ ಹಾಗೂ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಮತ್ತು ಸರ್ಕಾರದ ಆದೇಶದ ಸಂಖ್ಯೆ:ಸಿಆಸುಇ 08 ಸೇಹಿಮ 95 ದಿನಾಂಕ:20-06-1995 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 53 ಸೇನೇನಿ 2007 ದಿನಾಂಕ:04-01-2008ರಲ್ಲಿನ ಸರ್ಕಾರದ ಮೀಸಲಾತಿ ಮತ್ತು ಸಮತಳ ಮೀಸಲಾತಿಯನ್ವಯ ಇಲಾಖೆಯ ಪೂರ್ವಾನುಮತಿ ಪಡೆದು ಹುದ್ದೆಗಳನ್ನು ತುಂಬಬೇಕಾಗುತ್ತದೆ.

..2

3. ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ, ಅನುದಾನಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ವಯೋನಿವೃತ್ತಿ, ಸ್ವಯಂನಿವೃತ್ತಿ, ರಾಜೀನಾಮೆ, ವಜಾ ಮತ್ತು ನಿಧನದಿಂದ ತೆರವಾದ / ತೆರವಾಗುವ ಹುದ್ದೆಗಳಿಗೆ ಉಪನ್ಯಾಸಕರ ವೃಂದದಲ್ಲಿ ನಿಯಮಗಳನ್ವಯ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ತುಂಬಬೇಕಾಗುತ್ತದೆ.

4. ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವು ಆಯಾ ಆಡಳಿತ ಮಂಡಳಿಯೇ ಆಗಿರುತ್ತದೆ. ಆದ್ದರಿಂದ ಸದರಿ ನೇಮಕಾತಿಗಳಲ್ಲಿ ಉಪನ್ಯಾಸಕ ಹುದ್ದೆಗಳನ್ನು ಹಾಗೂ ಬೋಧಕೇತರ ಹುದ್ದೆಗಳನ್ನು ಆಯಾ ವೃಂದದಲ್ಲಿ ಒಂದು ವೃಂದ(ಕೇಡರ್) ಎಂದು ಪರಿಗಣಿಸಿ ಮೀಸಲಾತಿಯನ್ನು ಅನ್ವಯಿಸಲಾಗುತ್ತಿದೆ.

5. ಒಂದು ಹುದ್ದೆಯು ~~ಅನುದಾನಕ್ಕೆ~~ ಒಳಪಟ್ಟ ನಂತರ ಆ ಹುದ್ದೆಯು ವಿವಿಧ ಕಾರಣಗಳಿಂದ ತೆರವಾದಲ್ಲಿ ಅಂತಹ ಹುದ್ದೆಗಳಿಗೆ ಆರ್ಥಿಕ ಮಿತವ್ಯಯ ಅನ್ವಯವಾಗಲಿದ್ದು, ಸರ್ಕಾರವು ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ಆದೇಶಿಸಿದ ನಂತರದಲ್ಲಿ ಅಂತಹ ಹುದ್ದೆಗಳನ್ನು ಮೀಸಲಾತಿ ನಿಯಮಗಳನ್ವಯ ತುಂಬಲು ಸಂಬಂಧಿಸಿದ ವಿದ್ಯಾಸಂಸ್ಥೆಗಳಿಗೆ ಅನುಮತಿ ನೀಡಲಾಗುತ್ತಿದೆ. ಒಂದು ವೇಳೆ ತೆರವಾದ ಹುದ್ದೆಗಳು ಹಿಂಬಾಕಿ / ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿದಲ್ಲಿ ಅಂತಹ ಹುದ್ದೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 19 ಎಸ್.ಬಿ.ಸಿ 89 ದಿನಾಂಕ 25-07-1989 ರಲ್ಲಿ ಆರ್ಥಿಕ ಮಿತವ್ಯಯ ಅನ್ವಯಿಸುವುದಿಲ್ಲವೆಂದು ಆದೇಶಿಸಿರುವ ಪ್ರಯುಕ್ತ ಅಂತಹ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಸಂಬಂಧಿಸಿದ ವಿದ್ಯಾಸಂಸ್ಥೆಗಳಿಗೆ ಅನುಮತಿ ನೀಡಲಾಗುತ್ತಿದೆ.

6. ಬ್ಯಾಕ್‌ಲಾಗ್ ಹುದ್ದೆಗಳನ್ನು ದಿನಾಂಕ:01-01-1986 ರಿಂದ ಗುರ್ತಿಸಲು ಆದೇಶಿಸಿರುವುದರಿಂದ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿರುವ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕ ಹುದ್ದೆಗಳು ವಯೋನಿವೃತ್ತಿ, ಸ್ವಯಂನಿವೃತ್ತಿ, ರಾಜೀನಾಮೆ, ವಜಾ ಮತ್ತು ನಿಧನದಿಂದ ತೆರವಾದ/ ತೆರವಾಗುವ ಹುದ್ದೆಗಳಿಗೆ ಸರ್ಕಾರದ ಆದೇಶದ ಸಂಖ್ಯೆ:ಸಿಆಸುಇ 08 ಸೇಹಿಮ 95 ದಿನಾಂಕ:20-06-1995 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 53 ಸೇನೇನಿ 2007 ದಿನಾಂಕ:04-01-2008ರಲ್ಲಿನ ಸರ್ಕಾರದ ಮೀಸಲಾತಿ ಮತ್ತು ಸಮತಳ ಮೀಸಲಾತಿಯನ್ವಯ ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಲು ಅರ್ಹವಿರುವ ಪ್ರಕರಣಗಳನ್ನು ಗುರ್ತಿಸಿ ಪ್ರಸ್ತಾವನೆಯನ್ನು ಒಂದು ತಿಂಗಳೊಳಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ಉಲ್ಲೇಖ-5 ಮತ್ತು 07 ರ ಅರೆ ಸರ್ಕಾರಿ ಪತ್ರಗಳ ಮುಖಾಂತರ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ತಿಳಿಸಲಾಗಿತ್ತು.

7. ಆದಾಗ್ಯೂ ಈ ಬಗ್ಗೆ ಇದುವರೆವಿಗೂ ಯಾವುದೇ ಮಾಹಿತಿ / ಪ್ರಸ್ತಾವನೆಗಳು ಕೆಲವು ಜಿಲ್ಲಾ ಉಪ ನಿರ್ದೇಶಕರುಗಳಿಂದ ಸಲ್ಲಿಕೆಯಾಗಿರುವುದಿಲ್ಲ. ಜಿಲ್ಲಾ ವ್ಯಾಪ್ತಿಯಲ್ಲಿನ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ವಯೋನಿವೃತ್ತಿ, ಸ್ವಯಂನಿವೃತ್ತಿ, ರಾಜೀನಾಮೆ, ವಜಾ ಮತ್ತು ನಿಧನದಿಂದ ತೆರವಾದ/ ತೆರವಾಗುವ ಹುದ್ದೆಗಳಿಗೆ ಹುದ್ದೆಗೆ ನೇಮಕ ಮಾಡುವ ಪೂರ್ವದಲ್ಲಿ ಇಲಾಖೆಯಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.

..3

ರಾಜ್ಯದ ಕೆಲವು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಬೋಧಕ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇದ್ದರೂ ಸಹ ವಿದ್ಯಾಸಂಸ್ಥೆಗಳು ಇಲಾಖಾ ಗಮನಕ್ಕೆ ತರದೆ ಇರುವುದನ್ನು ನಿರ್ದೇಶನಾಲಯವು ಗಂಭೀರವಾಗಿ ಪರಿಗಣಿಸಿ ಅಂತಹ ಪದವಿ ಪೂರ್ವ ಕಾಲೇಜುಗಳ ವೇತನಾನುದಾನವನ್ನು / ಸಹಾಯಾನುಧಾನವನ್ನು ತಡೆ ಹಿಡಿಯುವ ಬಗ್ಗೆ ಮತ್ತು ಅಂತಹ ಪದವಿ ಪೂರ್ವ ಕಾಲೇಜುಗಳ ಆಡಳಿತ ಮಂಡಳಿಯ ವಿರುದ್ಧ ನಿಯಮಗಳನ್ವಯ ಕ್ರಮ ಜರುಗಿಸುವ ಬಗ್ಗೆ ಕ್ರಮ ಕೈಗೊಳ್ಳಲು ನಿರ್ದೇಶನಾಲಯಕ್ಕೆ ವರದಿ ಮಾಡುವಂತೆ ಉಲ್ಲೇಖ-5 & 7ರ ಪತ್ರಗಳಲ್ಲಿ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸೂಚಿಸಲಾಗಿದ್ದಾಗ್ಯೂ ಸಹ ಇದುವರೆವಿಗೂ ಇಲಾಖೆ ಅಪೇಕ್ಷಿಸಿದ ಮಾಹಿತಿ / ಪ್ರಸ್ತಾವನೆಗಳು ತಮ್ಮಿಂದ ಸಲ್ಲಿಕೆಯಾಗಿರುವುದಿಲ್ಲ.

8. ಏತನ್ಮಧ್ಯೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಗಳಿಗೆ ಸಂಬಂಧಿಸಿದಂತೆ ಸಚಿವ ಸಂಪುಟ ಸಮಿತಿಯು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬದಿರುವ ಕುರಿತು ದಿನಾಂಕ 17-01-2020 ರಂದು ನಡೆದ ಸಭೆಯಲ್ಲಿ ಸಮಿತಿಯು ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿ 45 ದಿನಗಳ ಕಾಲಾವಕಾಶವನ್ನು ನೀಡಿ ಈ ಅವಧಿಯಲ್ಲಿ ನಿಯಮಾನುಸಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ನಿರ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ಈ ಸುತ್ತೋಲೆಯೊಂದಿಗೆ ಅನುಬಂಧಿಸಿರುವ ನಮೂನೆಗಳಲ್ಲಿ 20 ದಿನಗಳ ಒಳಗಾಗಿ **ಡಾ: ಡಿ.ಕೆ ಸುಧಾ, ಉಪ ನಿರ್ದೇಶಕರು(ಪ್ರ) ಮಾನ್ಯತೆ ಮತ್ತು ಅನುದಾನ ಶಾಖೆ, ನಿರ್ದೇಶಕರ ಕಛೇರಿ ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ತಿರುವು, ಮಲ್ಲೇಶ್ವರ, ಬೆಂಗಳೂರು-560012** ಈ ವಿಳಾಸಕ್ಕೆ ಮಾಹಿತಿಯನ್ನು ಮುದ್ದಾಂ / ನೋಂದಾಯಿತ ಅಂಚೆಯ ಮೂಲಕ ಸಲ್ಲಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಿದೆ.

9. ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳ ವಿದ್ಯಾಸಂಸ್ಥೆಗಳು ಮೇಲೆ ಸೂಚಿಸಿರುವ ಮಾಹಿತಿಗಳನ್ನು ನಿಗದಿತ ಅವಧಿಯಲ್ಲಿ ಜಿಲ್ಲಾ ಉಪ ನಿರ್ದೇಶಕರಿಗೆ / ಇಲಾಖೆಗೆ ಸಲ್ಲಿಸದಿದ್ದಲ್ಲಿ ಅಂತಹ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಅನುಧಾನಿತ ಪದವಿ ಪೂರ್ವ ಕಾಲೇಜುಗಳ ವೇತನಾನುದಾನ / ಸಹಾಯಾನುದಾನವನ್ನು ತಡೆಹಿಡಿಯಲು ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

10. ಜಿಲ್ಲಾ ಉಪ ನಿರ್ದೇಶಕರುಗಳು ಒಂದು ವೇಳೆ ಜಿಲ್ಲಾ ವ್ಯಾಪ್ತಿಯಲ್ಲಿನ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳಿದ್ದಾಗ್ಯೂ ಸಹ ಸದರಿ ಮಾಹಿತಿಯನ್ನು ನಿಗದಿತ ಅವಧಿಯಲ್ಲಿ ನಿರ್ದೇಶನಾಲಯಕ್ಕೆ ಸಲ್ಲಿಸಲು ವಿಫಲರಾದಲ್ಲಿ ಅಥವಾ ವಿಳಂಬಧೋರಣೆ ಅನುಸರಿಸಿದಲ್ಲಿ ಅಂತಹ ಜಿಲ್ಲಾ ಉಪ ನಿರ್ದೇಶಕರುಗಳನ್ನೇ ಭವಿಷ್ಯದಲ್ಲಿ ಉದ್ಭವಿಸುವ ಎಲ್ಲಾ ಆಡಳಿತಾತ್ಮಕ ಸಮಸ್ಯೆಗಳಿಗೆ ಸಂಪೂರ್ಣ ಹೊಣೆಗಾರರನ್ನಾಗಿಸಿ ಕರ್ತವ್ಯಲೋಪ / ನಿರ್ಲಕ್ಷ್ಯವನ್ನು ಗಂಭೀರವಾಗಿ ಪರಿಗಣಿಸಿ ಮಾಹಿತಿ ಒದಗಿಸಲು ವೈಫಲ್ಯರಾದ ಜಿಲ್ಲಾ ಉಪ ನಿರ್ದೇಶಕರುಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು.

M. Kgly

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಉಪ ನಿರ್ದೇಶಕರು.

ಪ್ರತಿಗಳು ಮಾಹಿತಿಗಾಗಿ ಅಗತ್ಯ ಕ್ರಮಕ್ಕಾಗಿ:-

1. ರಾಜ್ಯದ ಎಲ್ಲಾ ಅನುದಾನಿತ ಪದವಿ ಪೂರ್ವ ಕಾಲೇಜುಗಳ ವಿದ್ಯಾಸಂಸ್ಥೆ/ ಟ್ರಸ್ಟ್‌ಗಳ ಅಧ್ಯಕ್ಷರು / ಕಾರ್ಯದರ್ಶಿಗಳಿಗೆ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರುಗಳ ಮೂಲಕ.
2. ನಿರ್ದೇಶಕರ ಆಪ್ತಶಾಖೆ / ಜಂಟಿ ನಿರ್ದೇಶಕರ ಆಪ್ತಶಾಖೆಯ ಮಾಹಿತಿಗಾಗಿ
3. ಮಾನ್ಯತೆ & ಅನುದಾನ ಶಾಖೆಯ ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು / ಶಾಖಾಧಿಕಾರಿಗಳು / ಅಧೀಕ್ಷಕರು / ವಿಷಯನಿರ್ವಾಹರುಗಳಿಗೆ
4. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಪಪೂಶಿಇ ಇವರಿಗೆ ಸುತ್ತೋಲೆಯನ್ನು ಇಲಾಖಾ ಅಂತರ್ಜಾಲದಲ್ಲಿ ಆಳವಡಿಸುವುದು.
5. ಕಛೇರಿ / ಹೆಚ್ಚುವರಿ.

# ನಮೂನೆ -1

## ನೇರ ನೇಮಕಾತಿಗೆ ಸಂಬಂಧಿಸಿದ ವಿವರಗಳು

| ಕ್ರ ಸಂ | ಗುಂಪು | ದಿ: 01.01.84 ರಿಂದ 21.11.2001 ರವರೆಗೆ ಗುರ್ತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳು | | | ದಿ: 01.01.84 ರಿಂದ 21.11.2001 ರವರೆಗೆ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಭರ್ತಿಮಾಡಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳು | | | ದಿ: 01.01.84 ರಿಂದ 21.11.2001 ರವರೆಗೆ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳು | | | ಭರ್ತಿ ಮಾಡದೇ ಇರಲು ಕಾರಣಗಳೇನು |
|---|---|---|---|---|---|---|---|---|---|---|---|
| | | ಪ.ಜಾತಿ | ಪ.ವರ್ಗ | ಒಟ್ಟು | ಪ.ಜಾತಿ | ಪ.ವರ್ಗ | ಒಟ್ಟು | ಪ.ಜಾತಿ | ಪ.ವರ್ಗ | ಒಟ್ಟು | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಎ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಬಿ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಸಿ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಡಿ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಒಟ್ಟು | | | | | | | | | | |

# ನಮೂನೆ-2

## ನೇರ ನೇಮಕಾತಿಗೆ ಸಂಬಂಧಿಸಿದ ವಿವರಗಳು

| ಕ್ರ ಸಂ | ಗುಂಪು | ದಿ: 22.11.2001 ರಿಂದ 31.08.2018 ರವರೆಗೆ ಗುರ್ತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳು | | | ದಿ: 22.11.2001 ರಿಂದ 31.08.2018 ರವರೆಗೆ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಭರ್ತಿಮಾಡಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳು | | | ದಿ: 22.11.2001 ರಿಂದ 31.08.2013 ರವರೆಗೆ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳು | | | ಭರ್ತಿ ಮಾಡದೇ ಇರಲು ಕಾರಣಗಳೇನು? |
|---|---|---|---|---|---|---|---|---|---|---|---|
| | | ಪ.ಜಾತಿ | ಪ.ವರ್ಗ | ಒಟ್ಟು | ಪ.ಜಾತಿ | ಪ.ವರ್ಗ | ಒಟ್ಟು | ಪ.ಜಾತಿ | ಪ.ವರ್ಗ | ಒಟ್ಟು | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಎ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಬಿ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಸಿ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಡಿ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಒಟ್ಟು | | | | | | | | | | |

# ನಮೂನೆ -3

## ಪದೋನ್ನತಿಗೆ ಸಂಬಂಧಿಸಿದ ವಿವರಗಳು

| ಕ್ರ ಸಂ | ಗುಂಪು | ದಿ: 27.04.1978ರಿಂದ 31.08.2018 ರವರೆಗೆ ಗುರ್ತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳು | | | ದಿ: 27.04.1978ರಿಂದ 31.08.2018 ರವರೆಗೆ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಭರ್ತಿಮಾಡಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳು | | | ದಿ: 27.04.1978 ರಿಂದ 31.08.2018 ರವರೆಗೆ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳು | | | ಭರ್ತಿ ಮಾಡದೇ ಇರಲು ಕಾರಣಗಳೇನು |
|---|---|---|---|---|---|---|---|---|---|---|---|
| | | ಪ.ಜಾತಿ | ಪ.ವರ್ಗ | ಒಟ್ಟು | ಪ.ಜಾತಿ | ಪ.ವರ್ಗ | ಒಟ್ಟು | ಪ.ಜಾತಿ | ಪ.ವರ್ಗ | ಒಟ್ಟು | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಎ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಬಿ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಸಿ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಡಿ- ವೃಂದವಾರು (ವೇತನ ಶ್ರೇಣಿಯೊಂದಿಗೆ) | | | | | | | | | | |
| | ಒಟ್ಟು | | | | | | | | | | |

# ನಮೂನೆ

## ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಬೋಧಕ ಬ್ಯಾಕ್‌ಲಾಗ್(ಹಿಂಬಾಕಿ) ಹುದ್ದೆಗಳ ವಿವರ

ಜಿಲ್ಲೆಯ ಹೆಸರು

| ಕ್ರಸಂ | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ ಕಾಲೇಜಿನ ಹೆಸರು & ವಿಳಾಸ | ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಒಟ್ಟು ಅನುದಾನಿತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ: | 01.01.86 ರಿಂದ 19.06.95 ರವರೆಗೆ ಅನುದಾನಕ್ಕೆ ಒಳಪಟ್ಟ ಹುದ್ದೆಗಳ ವಿವರ | ಸದರಿ ಹುದ್ದೆಗಳನ್ನು ಯಾವ ವರ್ಗದ ಅಭ್ಯರ್ಥಿಯಿಂದ ತುಂಬಲಾಗಿದೆ | ಬ್ಯಾಕ್‌ಲಾಗ್ / ಹುದ್ದೆಗಳು | | ಬ್ಯಾಕ್‌ಲಾಗ್ ಹುದ್ದೆಗಳನ್ನು ಸರಿದೂಗಿಸಿದಲ್ಲಿ ಮಾಹಿತಿ ಒದಗಿಸುವುದು | | 20.06.95ರ ನಂತರ ಅನುದಾನಕ್ಕೆ ಒಳಪಟ್ಟ ಹುದ್ದೆಗಳ ವಿವರ | ಸದರಿ ಹುದ್ದೆಗಳನ್ನು ಯಾವ ವರ್ಗದ ಅಭ್ಯರ್ಥಿಯಿಂದ ತುಂಬಲಾಗಿದೆ | ಬ್ಯಾಕ್‌ಲಾಗ್ ಹುದ್ದೆಗಳು | | ಬ್ಯಾಕ್‌ಲಾಗ್ ಹುದ್ದೆಗಳನ್ನು ಸರಿದೂಗಿಸಿದಲ್ಲಿ ಮಾಹಿತಿ ಒದಗಿಸುವುದು | | ಒಟ್ಟಾರೆ ಸರಿದೂಗಿಸಬೇಕಾದ ಬ್ಯಾಕ್‌ಲಾಗ್ ಹುದ್ದೆಗಳು | ಷರಾ |
|---|---|---|---|---|---|---|---|---|---|---|---|---|---|---|---|---|
| | | | | | ಪ.ಜಾ | ಪ.ಪಂ | ಪ.ಜಾ | ಪ.ಪಂ | | | ಪ.ಜಾ | ಪ.ಪಂ | ಪ.ಜಾ | ಪ.ಪಂ | | |
| | | | | | | | | | | | | | | | | |
| | | | | | | | | | | | | | | | | |
| | | | | | | | | | | | | | | | | |
| | | | | | | | | | | | | | | | | |
| | | | | | | | | | | | | | | | | |

(ವಿ.ಸೂ: ಹುದ್ದೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಸರ್ಕಾರವು ಮೀಸಲಾತಿ ಮನ್ನಾ ಮಾಡಿ ಆದೇಶಿಸಿದ್ದಲ್ಲಿ ಸರ್ಕಾರದ ಆದೇಶದ ದೃಢೀಕೃತ ಪ್ರತಿ ಸಲ್ಲಿಸುವುದು, ಬ್ಯಾಕ್‌ಲಾಗ್ ನಿಯಮದಡಿ ತುಂಬಿದ ಹುದ್ದೆಗಳ ಆದೇಶದ ಪ್ರತಿಯನ್ನು ಸಲ್ಲಿಸುವುದು)

ಮೇಲಿನ ಮಾಹಿತಿಗಳನ್ನು ಖುದ್ದು ಪರಿಶೀಲಿಸಿದ್ದು ಒದಗಿಸಿರುವ ಮಾಹಿತಿ ನೈಜ್ಯತೆಯಿಂದ ಕೂಡಿರುವುದಾಗಿ ದೃಢೀಕರಿಸುತ್ತೇನೆ.

ಸ್ಥಳ:

ದಿನಾಂಕ: ಉಪ ನಿರ್ದೇಶಕರ ಸಹಿ ಮತ್ತು ಮೊಹರಿನೊಂದಿಗೆ

# ನಮೂನೆ

## ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಬೋಧಕ ಬ್ಯಾಕ್‌ಲಾಗ್(ಹಿಂಬಾಕಿ) ಹುದ್ದೆಗಳ ವಿವರ

ಜಿಲ್ಲೆಯ ಹೆಸರು

| ಕ್ರಸಂ | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ ಕಾಲೇಜಿನ ಹೆಸರು & ವಿಳಾಸ | ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಒಟ್ಟು ಅನುದಾನಿತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ: | 01.01.86 ರಿಂದ 19.06.95 ರವರೆಗೆ ಅನುದಾನಕ್ಕೆ ಒಳಪಟ್ಟ ಹುದ್ದೆಗಳ ವಿವರ | ಸದರಿ ಹುದ್ದೆಗಳನ್ನು ಯಾವ ವರ್ಗದ ಅಭ್ಯರ್ಥಿಯಿಂದ ತುಂಬಲಾಗಿದೆ | ಬ್ಯಾಕ್‌ಲಾಗ್ / ಹುದ್ದೆಗಳು | | ಬ್ಯಾಕ್‌ಲಾಗ್ ಹುದ್ದೆಗಳನ್ನು ಸರಿದೂಗಿಸಿದಲ್ಲಿ ಮಾಹಿತಿ ಒದಗಿಸುವುದು | | 20.06.95ರ ನಂತರ ಅನುದಾನಕ್ಕೆ ಒಳಪಟ್ಟ ಹುದ್ದೆಗಳ ವಿವರ | ಸದರಿ ಹುದ್ದೆಗಳನ್ನು ಯಾವ ವರ್ಗದ ಅಭ್ಯರ್ಥಿಯಿಂದ ತುಂಬಲಾಗಿದೆ | ಬ್ಯಾಕ್‌ಲಾಗ್ ಹುದ್ದೆಗಳು | | ಬ್ಯಾಕ್‌ಲಾಗ್ ಹುದ್ದೆಗಳನ್ನು ಸರಿದೂಗಿಸಿದಲ್ಲಿ ಮಾಹಿತಿ ಒದಗಿಸುವುದು | | ಒಟ್ಟಾರೆ ಸರಿದೂಗಿಸಬೇಕಾದ ಬ್ಯಾಕ್‌ಲಾಗ್ ಹುದ್ದೆಗಳು | ಷರಾ |
|---|---|---|---|---|---|---|---|---|---|---|---|---|---|---|---|---|
| | | | | | ಪ.ಜಾ | ಪ.ಪಂ | ಪ.ಜಾ | ಪ.ಪಂ | | | ಪ.ಜಾ | ಪ.ಪಂ | ಪ.ಜಾ | ಪ.ಪಂ | | |
| | | | | | | | | | | | | | | | | |
| | | | | | | | | | | | | | | | | |
| | | | | | | | | | | | | | | | | |
| | | | | | | | | | | | | | | | | |
| | | | | | | | | | | | | | | | | |

(ವಿ.ಸೂ: ಹುದ್ದೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಸರ್ಕಾರವು ಮೀಸಲಾತಿ ಮನ್ನಾ ಮಾಡಿ ಆದೇಶಿಸಿದ್ದಲ್ಲಿ ಸರ್ಕಾರದ ಆದೇಶದ ದೃಢೀಕೃತ ಪ್ರತಿ ಸಲ್ಲಿಸುವುದು, ಬ್ಯಾಕ್‌ಲಾಗ್ ನಿಯಮದಡಿ ತುಂಬಿದ ಹುದ್ದೆಗಳ ಆದೇಶದ ಪ್ರತಿಯನ್ನು ಸಲ್ಲಿಸುವುದು)

ಮೇಲಿನ ಮಾಹಿತಿಗಳನ್ನು ಖುದ್ದು ಪರಿಶೀಲಿಸಿದ್ದು ಒದಗಿಸಿರುವ ಮಾಹಿತಿ ನೈಜ್ಯತೆಯಿಂದ ಕೂಡಿರುವುದಾಗಿ ದೃಢೀಕರಿಸುತ್ತೇನೆ.

ಸ್ಥಳ:

ದಿನಾಂಕ: ಉಪ ನಿರ್ದೇಶಕರ ಸಹಿ ಮತ್ತು ಮೊಹರಿನೊಂದಿಗೆ